**ದಿನಾಂಕ: 15.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : 2 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರಿಂದಃ**

8. ದಾವಾ ಐಟಂ ನಂ. 7 ರಲ್ಲಿ ವಿವರಿಸಿರುವ ಸರ್ವೇ ನಂ. 77 ಎ ಆಸ್ತಿಯು ಈಗ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿ. ಅದೇ ರೀತಿ ದಾವಾ ಐಟಂ ನಂ. 8 ರಲ್ಲಿರುವ ಸರ್ವೇ ನಂ. 77 ಸಿ ಆಸ್ತಿ ಕೂಡಾ ಈಗ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿ. ಸಾಕ್ಷಿಗೆ ಎಂ.ಆರ್. ನಂ. 84 ದಾಖಲೆಯನ್ನು ಕೊಟ್ಟು ಇದರ ಪ್ರಕಾರ ದಾವಾ ಐಟಂ ನಂ. 7 ರಿಂದ 9 ಈಗ ಯಾರ ಹೆಸರಿಗೆ ಖಾತೆಯಾಗಿದೆ ಹೇಳಿ ಎಂದು ಕೇಳಿದ್ದು ಸಾಕ್ಷಿಯು ಆ ದಾಖಲೆಯನ್ನು ಓದಿ ಮಲ್ಲಪ್ಪ ಬಿನ್ ಚೌಡಪ್ಪ ಇವರ ಹೆಸರಿಗೆ ಖಾತೆಯಾಗಿದೆ ಎಂದು ಹೇಳಿದ್ದರಿಂದ ಅದನ್ನು ನಿಡಿ **1** ಎಂದು ಗುರುತಿಸಿತು. ನಿಡಿ 1 ರ ಹಕ್ಕು ಬದಲಾವಣೆಯನ್ನು ಪಾಲುವಿಭಾಗದ ಪ್ರಕಾರ ಮಲ್ಲಪ್ಪನ ಹೆಸರಿಗೆ ಖಾತೆ ಮಾಡಲಾಗಿದೆ ಎಂದರೆ ಸರಿಯಲ್ಲ. ಪಾಲು ಪಟ್ಟಿಯಾದ ನಂತರ 2005-06 ನೇ ಸಾಲಿನಿಂದ 2023-24 ನೇ ಸಾಲಿನವರೆಗೂ ಈ ಆಸ್ತಿಗಳು ಮಲ್ಲಪ್ಪನ ಹೆಸರಿನಲ್ಲೇ ಇರುತ್ತವೆ ಎಂದರೆ ಸರಿ. ಚೌಡಪ್ಪನ ಮಕ್ಕಳ ನಡುವೆ ಪಾಲುವಿಭಾಗವಾಗಿ ಮಲ್ಲಪ್ಪನ ಹೆಸರಿಗೆ ಖಾತೆಯಾದ ನಂತರ ನಾನು ವಾದಿ ಚೌಡಮ್ಮನನ್ನು ಹರಪನಹಳ್ಳಿಯ ಎ.ಸಿ ಯವರ ಕೋರ್ಟಿಗೆ ಕರೆದುಕೊಂಡು ಹೋಗಿ ವ್ಯಾಜ್ಯ ಮಾಡಿಸಿದ್ದೆ ಎಂದರೆ ವ್ಯಾಜ್ಯ ಮಾಡಿಸಿದ್ದು ನಿಜ, ಆದರೆ ಪಾಲುವಿಭಾಗ ಆಗಿಲ್ಲ. ಎ.ಸಿ ಯವರ ಕೋರ್ಟಿನಲ್ಲಿ ನಾವು ಚೌಡಪ್ಪ, ಮಲ್ಲಪ್ಪ ಮತ್ತು ತಹಶೀಲ್ದಾರರನ್ನು ಎದುರುದಾರರಾಗಿ ಮಾಡಿದ್ದೆವು ಎಂದರೆ ಸರಿ.

***(ಸಮಯ ಮಧ್ಯಾಹ್ನ 2.00 ಗಂಟೆಯಾಗಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಿತು).***

**ಮಧ್ಯಾಹ್ನ 3.00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ 2 ರಿಂದ 5 ನೇ ಪ್ರತಿವಾದಿಗಳ ಪರ ವಕೀಲರಿಂದಃ**

9. ವಾದಿ ಚೌಡಮ್ಮ ಮತ್ತು ನಾನು ಸಲ್ಲಿಸಿದ ಆರ್.ಎ. ನಂ. 134/2023 ರಲ್ಲಿ ವಾದಿ ಚೌಡಮ್ಮ ಆಕೆಯ ತಂದೆ ಮತ್ತು ಸಹೋದರನಿಗೆ ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿಲ್ಲವೆಂದು ಪ್ರತಿಪಾದನೆ ಮಾಡಿದ್ದರೆಂದು ಉಲ್ಲೇಖವಾಗಿದೆ, ಆ ಸಂಗತಿ ನಿಜವೇ? ಎಂದರೆ ಹೌದು. ಸದರಿ ಆರ್.ಎ. ನಂ. 134/2023 ರಲ್ಲಿ ವಾದಿ ಚೌಡಮ್ಮ, ಚೌಡಪ್ಪ ಮತ್ತು ಮಲ್ಲಪ್ಪ ರಾಜಿ ಅರ್ಜಿ ಸಲ್ಲಿಸಿ ಜಮೀನುಗಳನ್ನು ಅವರ ಹೆಸರುಗಳಿಗೆ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಹೌದು, ನಾನು ಹೇಳುತ್ತೇನೆ, ವಾದಿ ಚೌಡಮ್ಮ ಆಕೆಯ ಅಣ್ಣ ಚೌಡಪ್ಪನ ಜೊತೆ ರಾಜಿ ಮಾಡಿಕೊಂಡಿದ್ದರು, ಮಲ್ಲಪ್ಪನ ಜೊತೆ ರಾಜಿ ಮಾಡಿಕೊಂಡಿರಲಿಲ್ಲ. ಆ ಪ್ರಕರಣದಲ್ಲಿ ಚೌಡಪ್ಪನ ಮಗ ಮಲ್ಲಪ್ಪ ಪಕ್ಷಕಾರನಾಗಿರಲಿಲ್ಲವೇ? ಎಂದರೆ ಇದ್ದರು. ನಾನು ವಾದಿ ಮತ್ತು ಚೌಡಪ್ಪ ಮಾತ್ರ ರಾಜಿ ಮಾಡಿಕೊಂಡಿದ್ದರು, ಮಲ್ಲಪ್ಪನ ಜೊತೆ ರಾಜಿ ಮಾಡಿಕೊಂಡಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಪ್ಪಾರ ದೊಡ್ಡಗುಂಡಪ್ಪ ಮತ್ತು ಉಪ್ಪಾರ ಸಣ್ಣಗುಂಡಪ್ಪ ಇವರ ಹಿಸ್ಸೆಗೆ ಬಂದ ಆಸ್ತಿಗಳ ಬಗ್ಗೆ ವಾದಿ ಚೌಡಮ್ಮ ಯಾವುದಾದರೂ ದಾವೆ ಸಲ್ಲಿಸಿದ್ದರೇ? ಎಂದರೆ ಸಲ್ಲಿಸಿಲ್ಲ, ನಾನು ಹೇಳುತ್ತೇನೆ, ವಾದಿ ಚೌಡಮ್ಮ ಎ.ಸಿ ಯವರ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದು ಬಿಟ್ಟು ಬೇರೆ ದಾವೆ ಹಾಕಿರಲಿಲ್ಲ. ದೊಡ್ಡಗುಂಡಪ್ಪನಿಗೆ ಯಾವುದೇ ಸಂತಾನವಿರಲಿಲ್ಲ ಎಂದರೆ ಸರಿ. ಸಣ್ಣಗುಂಡಪ್ಪನಿಗೆ ಮಲ್ಲಪ್ಪ ಮಾತ್ರ ಏಕೈಕ ಸಂತಾನವೆಂದರೆ ನನಗೆ ಗೊತ್ತಿಲ್ಲ. ವಾದಿಯಿಂದ ಜಿ.ಪಿ.ಎ ಪಡೆಯುವಾಗ ನಾನು ಉಪ್ಪಾರ ದೊಡ್ಡಗುಂಡಪ್ಪ ಮತ್ತು ಉಪ್ಪಾರ ಸಣ್ಣಗುಂಡಪ್ಪನ ಸಂತಾನದ ಬಗ್ಗೆ ವಾದಿಯಿಂದ

ವಿಚಾರಿಸಿ ತಿಳಿದುಕೊಂಡಿದ್ದುಂಟೇ? ಎಂದರೆ ತಿಳಿದುಕೊಂಡಿದ್ದೇನೆ. ವಾದಿಯು ನನಗೆ ಗುಂಡಪ್ಪನಿಗೆ ಸಂತಾನವಿಲ್ಲ ಎಂದಷ್ಟೇ ಹೇಳಿದ್ದರು. ದೊಡ್ಡಗುಂಡಪ್ಪನಿಗೆ ಸಂತಾನವಿಲ್ಲದಿದ್ದರಿಂದ ಆತ ತನ್ನ ತಮ್ಮ ಸಣ್ಣಗುಂಡಪ್ಪನ ಮಗ ಮಲ್ಲಪ್ಪನನ್ನು ತನ್ನ ಮಗನಾಗಿ ಕಾಣುತ್ತಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ದೊಡ್ಡಗುಂಡಪ್ಪನು ದಿನಾಂಕ 30.04.1952 ರಂದು ವಿಲ್ ಮೂಲಕ ಉಪ್ಪಾರ ಮಲ್ಲಪ್ಪನಿಗೆ ತನ್ನ ಎಲ್ಲಾ ಆಸ್ತಿಗಳನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಉಪ್ಪಾರ ಸಣ್ಣಗುಂಡಪ್ಪ ಮರಣ ಹೊಂದಿದ ನಂತರ ಆತನ ಆಸ್ತಿಗಳು ಮತ್ತು ವಿಲ್ ಮೂಲಕ ಉಪ್ಪಾರ ದೊಡ್ಡಗುಂಡಪ್ಪ ಕೊಡಮಾಡಿದ ಆಸ್ತಿಗಳು ಎಲ್ಲವೂ ಉಪ್ಪಾರ ಮಲ್ಲಪ್ಪನ ಹೆಸರಿನಲ್ಲಿ ಪಹಣಿ ನಮೂದಾದವು ಎಂದರೆ ಸರಿಯಲ್ಲ. ಉಪ್ಪಾರ ದೊಡ್ಡಗುಂಡಪ್ಪ 1952 ರ ವಿಲ್ ದಾಖಲೆಯಲ್ಲಿ ಆತನ ಹಿಸ್ಸೆಗೆ ಬಂದ ಆಸ್ತಿಗಳು ಹಾಗೂ ಆತ ಖರೀದಿ ಮಾಡಿದ ಆಸ್ತಿಗಳನ್ನು ವಿಲ್ ಮೂಲಕ ಉಪ್ಪಾರ ಮಲ್ಲಪ್ಪನಿಗೆ ಕೊಟ್ಟಿರುವುದಾಗಿ ಉಲ್ಲೇಖ ಮಾಡಿದ್ದಾರೆ ಎಂದರೆ ಸರಿಯಲ್ಲ. ಓ.ಎಸ್. ನಂ. 54/2013 ರ ದಾವೆಯಲ್ಲಿ ಉಪ್ಪಾರ ದೊಡ್ಡಗುಂಡಪ್ಪನ ವಿಲ್ ದಾಖಲೆಯನ್ನು ಉಪ್ಪಾರ ಮಲ್ಲಪ್ಪ ನಿಡಿ 28 ಎಂದು ಗುರುತಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕ 30.04.1952 ರ ವಿಲ್ ನ್ನು ರುಜುವಾತು ಮಾಡಲಾಗಿದೆ ಎಂದು ಓ.ಎಸ್. ನಂ.54/2013 ಮತ್ತು ಆರ್.ಎ. ನಂ. 62/2018 ರ ತೀರ್ಪುಗಳಲ್ಲಿ ನ್ಯಾಯಾಲಯ ತೀರ್ಮಾನ ಮಾಡಿರುತ್ತದೆ ಎಂದರೆ ಸುಳ್ಳು. ಆ ದಾವೆ ಮತ್ತು ಅಪೀಲಿನ ವಿರುದ್ಧ ಉಪ್ಪಾರ ಚೌಡಪ್ಪ ಮಾನ್ಯ ಹೈಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆಂದು ವಾದ ಪತ್ರದಲ್ಲಿ ಹೇಳಿದ್ದು, ಮೇಲ್ಮನವಿ ಸಲ್ಲಿಸಿದ ದಾಖಲೆಗಳನ್ನು ನಾನು ಹಾಜರು ಮಾಡಿದ್ದೀನಾ? ಎಂದರೆ ಮಾಡಿದ್ದೇನೆ. ನಾನು ಹಾಜರು ಮಾಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪೀಲು ಇನ್ನೂ ವಿಚಾರಣೆಯಲ್ಲಿದೆಯೇ ಅಥವಾ ತೀರ್ಮಾನವಾಗಿದೆಯೇ ಎಂಬ ಬಗ್ಗೆ ನಾನು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ ವಾದಿ ಚೌಡಮ್ಮ ನನ್ನನ್ನು ಆಕೆಯ ಜಿಪಿಎ ಆಗಿ ನೇಮಕ ಮಾಡಿಕೊಂಡಿದ್ದೇನೆಂದು ಎಲ್ಲಿಯೂ ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಮಧ್ಯಂತರ ಅರ್ಜಿ 2 ರ ಮೇಲೆ ದಿನಾಂಕ 26.10.2024 ರಂದು ಈ ನ್ಯಾಯಾಲಯ ಆದೇಶ ಮಾಡಿದ ನಂತರ ನಾನು ಜಿಪಿಎ ಆಗಿ ವಾದ ಪತ್ರ ತಿದ್ದುಪಡಿ ಮಾಡಿದ್ದೇನೆ ಎಂದರೆ ಸರಿ. ಆ ದಿನಾಂಕಕ್ಕಿಂತ ಹಿಂದೆ ನಾನು ವಾದಿಯ ಜಿಪಿಎ ಆಗಿರಲಿಲ್ಲ ಎಂದರೆ ಸರಿ. ಕೋರ್ಟಿಗೆ ಸಲ್ಲಿಸಿದ ವಾದ ಪತ್ರದ ವೆರಿಫಿಕೇಶನ್ ಅಫಿಡೆವಿಟ್ ಮತ್ತು ಮತ್ತು ವಂಶವೃಕ್ಷ ಇವುಗಳಿಗೆ ನಾನೇ ಸಹಿ ಮಾಡಿದ್ದೇನೆ ಎಂದರೆ ಸರಿ. ದಿನಾಂಕ 26.10.2024 ಕ್ಕಿಂತ ಹಿಂದೆ ವಾದಿ ಚೌಡಮ್ಮ ಸಲ್ಲಿಸಿದ ಪ್ಲೀಡಿಂಗ್ಸ್ ಗಳಿಗೆ ಸಹಿ ಮಾಡಲು ನನಗೆ ಅಧಿಕಾರವಿರಲಿಲ್ಲ ಎಂದರೆ ಚೌಡಮ್ಮನಿಗೆ ಓದಲು ಬರುವುದಿಲ್ಲ ನೀನು ಬಾಮ್ಮಾ ಎಂದು ಕರೆದಿದ್ದರಿಂದ ನಾನು ಬಂದು ಸಹಿ ಮಾಡಿದ್ದೆ. ವಾದಿಯು ತನ್ನ ವಾದ ಪತ್ರದಲ್ಲಿ ಆಕೆಗೆ ಓದು ಬರಹ ಬರುವುದಿಲ್ಲವೆಂದು ನನ್ನ ಸಹಾಯ ಪಡೆಯುತ್ತಿರುವುದಾಗಿ ಉಲ್ಲೇಖ ಮಾಡಿದ್ದಾರೆಯೇ? ಎಂದರೆ ಮಾಡಿಲ್ಲ. ವಾದಿ ಚೌಡಮ್ಮನಿಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಗೊತ್ತಿಲ್ಲ ಮತ್ತು ಆಕೆ ನನಗೆ ಯಾವುದೇ ಜಿಪಿಎ ಕೊಟ್ಟಿಲ್ಲವಾದರೂ ಈ ಆಸ್ತಿಗಳನ್ನು ಕಬಳಿಸಲು ನಾನೇ ಜಿಪಿಎ ಸೃಷ್ಟಿಸಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರದ 12 ನೇ ಪ್ಯಾರಾದಲ್ಲಿ ಉಪ್ಪಾರ ಚೌಡಪ್ಪ ಮತ್ತು ಉಪ್ಪಾರ ವೀರಭದ್ರಪ್ಪ ಹಾಗೂ ಇತರರು ಪಾಲುವಿಭಾಗ ಕೋರಿ ಓ.ಎಸ್. ನಂ. 54/2013 ನ್ನು ಸಲ್ಲಿಸಿದ್ದರೆಂದು ಬರೆದಿದೆ ಎಂದರೆ ಆ ದಾವೆಯನ್ನು ಉಪ್ಪಾರ ಚೌಡಪ್ಪ ಉಪ್ಪಾರ ವೀರಭದ್ರಪ್ಪನ ವಿರುದ್ಧ ಸಲ್ಲಿಸಿದ್ದರು. ಆರ್.ಎ. ನಂ. 62/2018 ರಲ್ಲಿ ಉಪ್ಪಾರ ಚೌಡಪ್ಪ ಮಧ್ಯಂತರ ಅರ್ಜಿ 2 ನ್ನು ಸಲ್ಲಿಸಿ ವಿಲ್ ಮೂಲಕ ಉಪ್ಪಾರ ಮಲ್ಲಪ್ಪನಿಗೆ ಬಂದಿದ್ದ ಆಸ್ತಿಗಳನ್ನು ಸೇರ್ಪಡೆ ಮಾಡುವಂತೆ ಕೋರಿದ್ದರು ಎಂದರೆ ಸರಿಯಲ್ಲ. ಮಧ್ಯಂತರ ಅರ್ಜಿ 3 ನ್ನು ಸರ್ವೇ ನಂ. 175 ಎ ಆಸ್ತಿ ಖರೀದಿ ಮಾಡಿದ ಮಣ್ಣಪ್ಪನವರ ಬಸಪ್ಪನ

ವಾರಸುದಾರರನ್ನು ಸೇರ್ಪಡೆ ಮಾಡುವಂತೆ ಕೋರಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಆ ಎರಡೂ ಅರ್ಜಿಗಳು ವಜಾ ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ.

10. ನಾನು ಹಾಜರುಪಡಿಸಿದ ನಿಪಿ 2ರ ಪ್ರಕಾರ ಗುಂಡಪ್ಪನ ಮರಣದ ನೋಂದಣಿ ದಿನಾಂಕ 28.05.2024 ರಂದು ಆಗಿದೆ ಎಂದರೆ ಸರಿ. ಉಪ್ಪಾರ ಚೌಡಪ್ಪ ಹಡಗಲಿಯ ಸಿವಿಲ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಗುಂಡಪ್ಪ ದಿನಾಂಕ 12.05.1936 ರಂದು ಮರಣ ಹೊಂದಿದ್ದಾನೆಂದು ಸುಳ್ಳು ಮಾಹಿತಿ ನೀಡಿ ಆ ಮರಣ ಪ್ರಮಾಣ ಪತ್ರವನ್ನು ಪಡೆದಿದ್ದಾನೆ ಎಂದರೆ ಸರಿಯಲ್ಲ ನಿಪಿ 3 ರಲ್ಲಿರುವ ಮರಣ ಪ್ರಮಾಣ ಪತ್ರವನ್ನೂ ಕೂಡಾ ಚೌಡಪ್ಪ ಕೋರ್ಟಿಗೆ ಸುಳ್ಳು ಮಾಹಿತಿ ನೀಡಿ ದಿನಾಂಕ 28.05.2024 ರಂದು ಉಳ್ಳಮ್ಮನ ಮರಣ ದಿನಾಂಕ ನಮೂದು ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ 3 ರಿಂದ ನಿಪಿ 7 ರಲ್ಲಿರುವ ಮರಣ ಪ್ರಮಾಣ ಪತ್ರಗಳನ್ನೂ ಕೂಡಾ ಉಪ್ಪಾರ ಚೌಡಪ್ಪ ಕೋರ್ಟಿಗೆ ಸುಳ್ಳು ಮಾಹಿತಿ ನೀಡಿ ಸುಳ್ಳು ಮರಣ ದಿನಾಂಕ ನಮೂದಿಸಿ ಪಡೆದುಕೊಂಡಿದ್ದಾನೆ ಎಂದರೆ ಸರಿಯಲ್ಲ. ನಿಪಿ 2 ರಿಂದ ನಿಪಿ 7 ಮರಣ ಪ್ರಮಾಣ ಪತ್ರಗಳನ್ನು ಓ.ಎಸ್. ನಂ. 54/2013 ಮತ್ತು ಆರ್. ಎ. ನಂ. 62/2018 ರ ತೀರ್ಪು ಬಂದ ನಂತರವೇ ಪಡೆಯಲಾಗಿದೆ ಎಂದರೆ ಸರಿಯಲ್ಲ. ಈ ದಾವೆಗೆ ಅನುಕೂಲವಾಗುವಂತೆ ನಾನು ಮತ್ತು ನನ್ನ ಮಾವ ಉಪ್ಪಾರ ಚೌಡಪ್ಪ ಎಲ್ಲಾ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಉಪ್ಪಾರ ಮಲ್ಲಪ್ಪನ ಮರಣಾ ನಂತರ ಆತನ ಹೆಸರಿನಲ್ಲಿರುವ ಆಸ್ತಿಗಳನ್ನು ಆತನ ಮಗ 2 ನೇ ಪ್ರತಿವಾದಿ ಮತ್ತು ಆತನ 2 ನೇ ಹೆಂಡತಿ ಬೆಟ್ಟಮ್ಮ ಎಂ.ಆರ್. ನಂ. 79/1983-84 ರಂತೆ ಪೌತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಎಂ.ಆರ್. ನಂ. 79/1983-84 ನ್ನು ಇಲ್ಲಿಯವರೆಗೆ ವಾದಿ ಚೌಡಮ್ಮನಾಗಲೀ ಅಥವಾ ಉಪ್ಪಾರ ಚೌಡಪ್ಪನಾಗಲೀ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಮ್ಯುಟೇಶನ್ ಪ್ರಕಾರ ಖಾತೆಯಾಗಿರುವ ಎಲ್ಲಾ ಆಸ್ತಿಗಳ ಸ್ವಾಧೀನದಲ್ಲಿ 2 ರಿಂದ 6 ನೇ ಪ್ರತಿವಾದಿಗಳೇ ಇರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ವಾದಿಗೆ, ನನಗೆ ಮತ್ತು ಚೌಡಪ್ಪನಿಗೆ ಆ ಸಂಗತಿ ಗೊತ್ತಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನನಗೆ ಜಿಪಿಎ ಕೊಡದೇ ಇದ್ದರೂ ಅದನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯ ವಾದಿ ಚೌಡಮ್ಮನನ್ನು ಹಾಜರು ಮಾಡುವಂತೆ ನನಗೆ ಸೂಚಿಸಿತ್ತು ಎಂದರೆ ಸರಿ. ನಾನು ವಾದಿಯನ್ನು ಕೋರ್ಟಿಗೆ ಕರೆ ತಂದಿಲ್ಲ ಎಂದರೆ ಸರಿ. ವಾದಿ ಚೌಡಮ್ಮ ಕೋರ್ಟ್ ಮುಂದೆ ಬಂದರೆ ಎಲ್ಲಾ ಸಂಗತಿ ಗೊತ್ತಾಗುತ್ತದೆ ಎಂಬ ಭಯದಿಂದ ನಾನು ಹಾಜರು ಮಾಡುತ್ತಿಲ್ಲ ಎಂದರೆ ಸರಿಯಲ್ಲ. ವಾದಿ ಚೌಡಮ್ಮನಿಗೆ ಆಕೆಯ ತಂದೆ ಉಪ್ಪಾರ ಮುದುಕಪ್ಪನ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ಮಾತ್ರ ಹಿಸ್ಸೆಯ ಹಕ್ಕು ಇದೆ ಎಂದರೆ ಉಪ್ಪಾರ ಮುದುಕಪ್ಪನ ಎಲ್ಲಾ ಆಸ್ತಿಗಳಲ್ಲಿ ಹಕ್ಕು ಇದೆ . ಉಪ್ಪಾರ ಮುದುಕಪ್ಪ ಮತ್ತು ಆತನ ಸಹೋದರರು 1941 ಕ್ಕಿಂತ ಹಿಂದೆಯೇ ವಿಭಾಗವಾಗಿದ್ದರೂ ಇಲ್ಲವೆಂದು ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 7 ನೇ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಿದೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**